**Order Sheet**
**In the Court Of: PRL. CIVIL JUDGE AND JMFC BELAGAVI**
**AT BELGAUM**
**F.R.No:O.S./159/2016**
**Case Reg.No: O.S./158/2016**

| **Plaintiff** | V E R S U S | **Defendent** |
|---|---|---|

---

| | |
|---|---|
| **1)Shri. Babasaheb alias Balasaheb So. Kedari Pawar** | **1)Shri. Jotiba So. Subahanrao Pawar &7 others**<br><br>**2)Shri Arvind So. Subhashanrao Pawar**<br>**3)Shri. Somanath So. Subahanrao Pawar**<br>**4)Smt. Sushila Wo. Narayan Hawaldar**<br>**5)Smt. Leela Wo. Bhimanna Kalji**<br>**6)Smt. ratnabai Wo. Anand Killekar**<br>**7)Smt. Vasanti Wo. Bhavaku Mandolkar** |

ಪ್ರಮಾಣ ವಚನ ಬೋಧಿಸಿದ ತಾ: 18-4-2017.

ಅನುಮತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ : ಶ್ರೀ. ಸಿ.ಎಸ್.ಎಂ. ವಕೀಲರಿಂದ.

ವಾದಿ ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜವಿರುತ್ತವೆ ಎಂದು ಪ್ರಮಾಣ ಮಾಡಿರುತ್ತಾರೆ.

ದಿಃ 23-9-92 ರ ಮರಾಠಿ ಭಾಷೆಯಲ್ಲಿರುವ ಖರೀದಿ ಅಡವಾನ್ಸ ಪಾವತಿ ರಶೀದಿಯನ್ನು ಇಂಗ್ಲೀಷ ಭಾಷಾಂತರ ಪ್ರತಿಯೊಂದಿಗೆ ಹಾಜರಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಪಿ-1 ಮತ್ತು ನಿಪಿ-2, ನಿಪಿ-1 ರಲ್ಲಿರುವ ಎಂ.ಜೆ. ಮುಂಗೋಲಿ, ಬಿ.ಬಿ ಮುಕ್ತೆಕರ ಮತ್ತು ಆರ್.ಎಲ್ ಅಂಬೇವಾಡಿಯವರು ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಅನುಕ್ರಮವಾಗಿ ನಿಪಿ-1 (ಎ), 1 (ಬಿ) 1 (ಸಿ), ಹಾಗೂ 1 ಮತ್ತು 3ನೇ ತಂದೆಯಾದಂತಹ ಸುಬಾನಾರಾವ ಬಾಗೋಜಿ ಪಾವರ ರವರ ಸಹಿಯನ್ನು ನಿಪಿ-1 ಡಿ ಎಂಬುದಾಗಿ ಗುರುತಿಸಲಾಯಿತು. ಸಾಕ್ಷಿ ಮರಾಠಿ ಭಾಷೆಯಲ್ಲಿರುವಂತಹ ದಿಃ 25-5-99 ರ ನೋಂದಾಯಿತವಲ್ಲದ ಕರಾರವನ್ನು ಇಂಗ್ಲೀಷ ಭಾಷಾಂತರ ಪ್ರತಿಯೊಂದಿಗೆ ಹಾಜರಪಡಿಸಿದ್ದು, ಸದರಿ ಕ್ರಯದ ಕರಾರಿನಲ್ಲಿ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಹಸ್ತಾಂತರಿಸಿದ ಬಗ್ಗೆ ಉಲ್ಲೇಖ ಇದ್ದು,

ಸಾಕ್ಷಿ ಆ ದಾಖಲೆಯ ಮೇಲೆ ಕೋರತೆ ಮುದ್ರಾಂಕ ಶುಲ್ಕವನ್ನು ದಂಡದೊಂದಿಗೆ ಪಾವತಿಸಲು ಭದ್ದನಾಗಿರುತ್ತೇನೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು ನಿಪಿ-3 ಮತ್ತು ನಿಪಿ-4 ಮತ್ತು ನಿಪಿ-3 ಕ್ರಯದಕರಾರು ಬರೆದುಕೊಟ್ಟಂತಹ ಮಾರಾಟಗಾರರಾಂದತಹ ಸುಬಾನರಾವ ಬಾಗೋಜಿ ಪವಾರರವರ ಹೆಬ್ಬಿಟ್ಟಿನ ಗುರುತನ್ನು ನಿಪಿ-3 ರಲ್ಲಿ ನೋಡಿ ಗುರುತಿಸಿರುತ್ತಾರೆ. ಹಾಗೂ ಆ ದಾಖಲೆಗಿ, ಸಾಕ್ಷಿಗಳಾದಂತಹ ಜೆ.ಎಸ.ಪವಾರ, ಎಫ್.ಆರ್ ಶಹಪುರಕರ, ಎ.ಎಸ್ ಪವಾರ, ಎಸ್.ಎಸ್ ಪವಾರ, ಜೆ.ಜಿ ಪವಾರ ಹಾಗೂ ಎಸ್ ಶಹಪುರಕರ ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ-3 (ಎ), ನಿಪಿ-3(ಬಿ.) ನಿಪಿ-3 (ಸಿ), ನಿಪಿ-3 (ಡಿ), ನಿಪಿ-3 (ಇ) ಮತ್ತು ನಿಪಿ-3 (ಎಫ್) ಎಂಬುದಾಗಿ ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖಾಡಾ ಖುಡಾ ಎಕಸಟ್ರ್ಯಾಕ್ಟನ ದೃಢಿಕೃತ ನಕಲನ್ನು ನಿಪಿ-5, ನಕ್ಷೆಯನ ದೃಢೀಕೃತ ನಕಲನ್ನು ನಿಪಿ-6, ಪ್ರಾಪರ್ಟಿ ರಿಜಿಸ್ಟರ್‌ರ ದೃಡೀಕೃತ ನಕಲುಗಳನ್ನು ನಿಪಿ-7 ಮತ್ತು ನಿಪಿ-8, ವಕೀಲರ ತಿಳುವಳಿಕೆ ಪತ್ರವನ್ನು ನಿಪಿ-9, ಅಂಚೆ ರಶೀದಿಗಳನ್ನು ಮತ್ತು ಸ್ವೀಕೃತಿಗಳನ್ನು ಅನುಕ್ರಮವಾಗಿ ನಿಪಿ-23, 1ನೇ ಪ್ರತಿವಾದಿ ಹಾಗೂ ಇತರ ಪ್ರತಿವಾದಿಗಳು ಪ್ರತ್ಯೇಕವಾಗಿ ನೀಡಿರುವ ಪ್ರತ್ಯುತ್ತರವನ್ನು ನಿಪಿ-24 ಮತ್ತು ನಿಪಿ-25, ದಾವಾಸ್ವತ್ತಿನಲ್ಲಿರುವ ಮನೆಗೆ ಸಂಬಂಧಪಟ್ಟ ವಿದ್ಯುತ್ ಬಿಲ್ ಹಾಗೂ ಪಾವತಿ ರಶೀದಿಗಳನ್ನು ನಿಪಿ-26 ಮತ್ತು ನಿಪಿ-27, ಗುರುತಿನ ಚೀಟಿಯನ್ನು ನಿಪಿ-28 ಎಂಬುದಾಗಿ ಗುರುತಿಸಲಾಯಿತು,

ಮುಂದುವರೆದ ಮುಖ್ಯ ವಿಚಾರಣೆ ಸಮಯವನ್ನು ಕೋರಿದ್ದು, ಪ್ರತಿವಾದ ಪತ್ರ ಸಲ್ಲಿಸದ ಕಾರಣ, ಕೊರತೆ ಮುದ್ರಾಂಕ ಶುಲ್ಕ ಮತ್ತು ದಂಡ ಪಾವತಿಸಲು ಮತ್ತು ಪಾಟೀ ಸಾಲಿಗೆ ಮುಂದೂಡಲಾಯಿತು.

( ತೆ. ನ್ಯಾ. ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿಯಿದೆ.
ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ವ
ಜೆ. ಎಮ್.ಎಫ್.ಸಿ, ಬೆಳಗಾವಿ.